ಸದನವು ಪುನಃ 3.10ಕ್ಕೆ ಪ್ರಾರಂಭವಾಯಿತು.

ಉಪಾಧ್ಯಕ್ಷರಾದ (ಶ್ರೀ ಚಂದ್ರಶೇಖರ್. ಸಿ. ಮಾಮನಿ) ಅವರು ಉಪಸ್ಥಿತರಾಗಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ಪೌರಾಣಿಕ ನಾಟಕ ಕಲಿಸುವ ಮಾಸ್ತರರುಗಳಿಗೆ ಪ್ರೋತ್ಸಾಹ ಧನ

181 - ಶ್ರೀ ಕೆ.ಎನ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಪೌರಾಣಿಕ ನಾಟಕಗಳನ್ನು ಕಲಿಸುವ ಮಾಸ್ತರುಗಳು ಬೀದಿ ಪಾಲಾಗಿದ್ದು, ಇವರಿಗೆ ಪ್ರೋತ್ಸಾಹ ಧನವನ್ನು ಕೊಡುವ ಆಲೋಚನೆ ಇದೆಯೇ?

ಆ) ಇವರಿಗೆ ಪ್ರೋತ್ಸಾಹ ಧನವನ್ನು ಕೊಡುವ ದರದ ಮೂಲಕ ಗ್ರಾಮಾಂತರ ಪ್ರದೇಶದ ಕಲೆಯು ನಶಿಸಿಹೋಗದಂತೆ ತಡೆಯುವುದಿಲ್ಲವೆ;

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಹಾಗೂ ಸಂಸ್ಕೃತಿ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಉಪಾಧ್ಯಕ್ಷರೆ, ಗ್ರಾಮಾಂತರ ಪ್ರದೇಶಗಳಲ್ಲಿ ಪೌರಾಣಿಕ ನಾಟಕಗಳನ್ನು ಕಲಿಸುವ ಮಾಸ್ತರುಗಳು ಬೀದಿ ಪಾಲಾಗಿದ್ದು, ಇವರಿಗೆ ಪ್ರೋತ್ಸಾಹ ಧನವನ್ನು ಕೊಡುವ ಆಲೋಚನೆ ಇದೆಯೇ ಎಂದು ಕೇಳಿದ್ದೇನೆ; ಅದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಇವರಿಗೆ ಪ್ರೋತ್ಸಾಹಧನವನ್ನು ಕೊಡುವುದರ ಮೂಲಕ ಗ್ರಾಮಾಂತರ ಪ್ರದೇಶದ ಕಲೆಯು ನಶಿಸಿಹೋಗದಂತೆ ತಡೆಯುವುದಿಲ್ಲವೇ ಎಂದು ಕೇಳಿರುವಂಥದ್ದಕ್ಕೆ "ಉದ್ಭವಿಸುವುದಿಲ್ಲ" ಎಂದು ಹೇಳಿದ್ದಾರೆ. ಅಂದರೆ ಪ್ರಶ್ನೆ ಕೇಳಬೇಕಾಗಿಲ್ಲ ಎಂದು ಆಯಿತು. ನಿಜವಾಗಿಯೂ ಜಾನಪದ ಕಲೆ, ಸಂಸ್ಕೃತಿ, ಕನ್ನಡ ಭಾಷೆ ಅವಿದ್ಯಾವಂತರಿಗೆ ಅಲ್ಪಸ್ವಲ್ಪ ಜ್ಞಾನ ಬರತಕ್ಕಂಥ ಕೆಲಸವನ್ನು ಸುಮಾರು 40-50 ವರ್ಷಗಳಿಂದ ಮಾಡಿಕೊಂಡು ಬಂದಂಥ ಮಾಸ್ತರುಗಳಿಗೆ ಇವೊತ್ತು ಊಟ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ಬಂದಿದೆ. ಇವೊತ್ತು ಅವರು ಬೀದಿಪಾಲಾಗಿದ್ದಾರೆ. ಕನಿಷ್ಟ ಅವರಿಗೆ ಯಾವ ನಿಯಮಾವಳಿಯಲ್ಲಿ ಮಾಶಾಸನ ಕೊಡಬಹುದು, ಯಾವುದಾದರೂ ಮಾಶಾಸನ ಕೊಡತಕ್ಕಂಥ ಪದ್ಧತಿ ಇದೆಯೇ, ಮಾಶಾಸನ ಕೊಡಬೇಕಾದರೆ ಸರ್ಕಾರ ಏನು ಆಲೋಚನೆ ಮಾಡಿದೆ ಎಂಬುದನ್ನು ದಯವಿಟ್ಟು ಹೇಳಬೇಕು. ಮತ್ತು ಬೀದಿ ಪಾಲಾಗಿರತಕ್ಕ ಆ ಮಾಸ್ತರಿಗೆ ಆಶ್ರಯ ಮನೆ ಯೋಜನೆಯಲ್ಲಿ ಕನಿಷ್ಟ ವಾಸಕ್ಕೆ ಒಂದು ಮನೆಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ನಂತರ ಅವರಿಗೆ ಹಸಿರುಕಾರ್ಡು ಕೊಡತಕ್ಕ ವ್ಯವಸ್ಥೆಯನ್ನು

ಮಾಡಬೇಕು. ಏಕೆಂದರೆ ಅವರಿಗೆ ಉದ್ಯೋಗ ಇರುವುದು ಬೇಸಿಗೆ ಕಾಲದಲ್ಲಿ 3 ರಿಂದ 4 ನಾಲ್ಕು ತಿಂಗಳು ಬಿಟ್ಟರೆ ಆಮೇಲೆ ಎಂಟು ತಿಂಗಳು ಅವರಿಗೆ ಉದ್ಯೋಗ ಇರುವುದಿಲ್ಲ. ಆ ನಾಲ್ಕು ತಿಂಗಳು ಅವರು ಎಲ್ಲರ ಮನೆಯಲ್ಲೂ ಊಟ ಮಾಡಿ ಜೀವನ ಮಾಡಿರುತ್ತಾರೆ, ಅಲ್ಪಸ್ವಲ್ಪ ಹಣವನ್ನೂ ಕೂಡ ಹಳ್ಳಿಯಲ್ಲಿ ಪೌರಾಣಿಕೆ ನಾಟಕವಾಡುವವರು ಕೊಟ್ಟಿರುತ್ತಾರೆ. ಆದ್ದರಿಂದ ಸರ್ಕಾರ ಕಲೆಗೆ ಪ್ರೋತ್ಸಾಹ ಕೊಡುವುದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಎಂದು ಕೇವಲ ಬೋರ್ಡ್ ಹಾಕಿಕೊಂಡಿದ್ದರೆ ಪ್ರಯೋಜನವಿಲ್ಲ. ನಿಜವಾಗಲೂ ಸಂಸ್ಕೃತಿ ಬಗ್ಗೆ, ಕಲೆಯ ಬಗ್ಗೆ, ಸರ್ಕಾರಕ್ಕೆ ಕಾಳಜಿ ಇದ್ದರೆ ಈ ನೋವಿನಲ್ಲಿ ಇರತಕ್ಕ ವರ್ಗದವರಿಗೆ, ಈಗಾಗಲೇ 60 ಭಾಗ ಸತ್ತು ಹೋಗಿದ್ದಾರೆ, ಇನ್ನು 40 ಭಾಗ ಉಳಿದುಕೊಂಡಿದ್ದಾರೆ. ಅವರು ಇನ್ನೊಂದು 10-12 ವರ್ಷಗಳಲ್ಲಿ ಸತ್ತು ಹೋಗುತ್ತಾರೆ. ಏಕೆಂದರೆ ಚಲನಚಿತ್ರ ಯಾವಾಗ ಬಂತು, ದೂರದರ್ಶನ ಯಾವಾಗ ಬಂತು, ಈಗ ಯಾರೂ ಪೌರಾಣಿಕ ನಾಟಕ ಆಡುವುದಿಲ್ಲ. ಉಳಿದುಕೊಂಡಿರುವವರ ಬಗ್ಗೆ ಸರ್ಕಾರ ದಯವಿಟ್ಟು ಚಿಂತನೆ ಮಾಡಬೇಕೆಂದು ನಾನು ಉಪಾಧ್ಯಕ್ಷರ ಮೂಲಕ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ನಿಜ ಉತ್ತರವನ್ನು ಕೊಡುವಾಗ ಇಲ್ಲ ಎಂದು ಹೇಳಿದ್ದೇವೆ. ಅಂದರೆ ಪ್ರೋತ್ಸಾಹಧನ ಕೊಡುತ್ತಾ ಇರತಕ್ಕಂಥದ್ದು ಇಲ್ಲ ಎಂದು ಹೇಳಿದ್ದೇವೆ. ಆದರೆ ಸರ್ಕಾರ ಮಾಸಾಶನವನ್ನು ಕೊಡುತ್ತಾ ಇದೆ. ಈ ಮಾಸಾಶನ ಕೊಡುವುದರ ಪಟ್ಟಿಗಳಲ್ಲಿ ಕಲಾವಿದರೂ ಇದ್ದಾರೆ, ಸಾಹಿತಿಗಳೂ ಇದ್ದಾರೆ ಜಾನಪದ ಕ್ಷೇತ್ರದಲ್ಲಿರುವವರೂ ಇದ್ದಾರೆ ಮತ್ತು ಈ ರಂಗಭೂಮಿಯಲ್ಲಿ ಇರತಕ್ಕಂಥ ಮಾಸ್ತರುಗಳು ಯಾರಿದ್ದಾರೆ ಅವರಿಗೂ ಕೊಡತಕ್ಕಂಥದ್ದು ಇದೆ. ಈಗ ಕೊಡುತ್ತಾ ಇರತಕ್ಕಂಥ ಮಾಸಾಶನ 250 ರೂಪಾಯಿ. ಅದರಲ್ಲಿ ಎಷ್ಟು ಜನರಿಗೆ ಮಸಾಶನವನ್ನು ಕೊಡುತ್ತಿದ್ದೇವೆ ಎಂದರೆ 5700 ಜನ. ಈ ಎಲ್ಲಾ ವೃತ್ತಿಯಲ್ಲಿರತಕ್ಕವರಿಗೆ ಮಾಸಾಶನ ಕೊಡುತ್ತಾ ಇರತಕ್ಕಂಥದ್ದರಲ್ಲಿ ಈ ವರ್ಗಕ್ಕೆ ಸೇರಿರತಕ್ಕವರ ಪಟ್ಟಿ ನನ್ನಲ್ಲಿ ಇಲ್ಲ, ಅದನ್ನು ನಾನು ಬೇಕಾದರೆ ತರಿಸಿಕೊಡುತ್ತೇನೆ. ಆದರೆ ಈಗ ಮಾಸಾಶನ ಕೊಡಲಿಕ್ಕೆ ಇರತಕ್ಕಂಥ ನಿಯಮಗಳು ಏನು ಎಂದರೆ ಅವರಿಗೆ 58 ವರ್ಷ ಪ್ರಾಯ ಆಗಿರಬೇಕು, ಇದು ಒಂದನೆಯದು. ಎರಡನೆಯದು, ವೃತ್ತಿಯನ್ನು ನಡೆಸಲಿಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿ ಇರಬೇಕು. ಮೂರನೆಯದಾಗಿ ಅವರ ವಾರ್ಷಿಕ ವರಮಾನ 1,000 ರೂಪಾಯಿಗಳ ಒಳಗಡೆ ಇರಬೇಕೆಂಬುದು ನಿಜ, ಇದು ಬಹಳ ಹಳೆಯ ಕಾಲದಲ್ಲಿ ಮಾಡಿರುವಂತಹ ನಿಯಮಾವಳಿಯಾಗಿದೆ. ನಿಮ್ಮ ಚಿಂತನೆಯನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ, ತಿಂಗಳಿಗೆ 150 ರೂಪಾಯಿಗಳು ಇದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಅವರಿಗೆ ಕೊಡುವ ತಿಂಗಳಿಗೆ 150 ರೂಪಾಯಿಗಳಲ್ಲಿ ಏನು ಮಾಡಬಹುದೆಂದರೆ ಸಾಯುವುದಕ್ಕೆ ಯಾವುದಾದರೂ ಔಷಧಿಯನ್ನು ತೆಗೆದುಕೊಳ್ಳಬಹುದು.

ಶ್ರೀ ಎಂ.ಸಿ. ನಾಣಯ್ಯ : ಅದು ಆಗುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಇದು ಪ್ರಾಯಶಃ ಪೌರಾಣಿಕ ಕಾಲದ ರೇಟ್ ಇರಬಹುದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಆದುದರಿಂದ ತಾವು 20, 200 ರೂಪಾಯಿಗಳ ವಾರ್ಷಿಕ ಆದಾಯದ ಬಗ್ಗೆ ಆಲೋಚನೆ ಮಾಡಬೇಕು.

ಶ್ರೀ ಎಂ. ಸಿ. ನಾಣಯ್ಯ : ಇಲಾಖೆಯ ವತಿಯಿಂದ ವಾರ್ಷಿಕ ವರಮಾನ 15,000 ರೂಪಾಯಿಗಳಿಗೆ ಏರಿಸಬೇಕೆಂದು ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಇದರ ಬಗ್ಗೆ ನಾವು ಚಿಂತನೆ ಮಾಡುತ್ತೇವೆ. ಎರಡನೆಯದಾಗಿ ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ಹಳೆಯ ಮೈಸೂರು ಭಾಗದಲ್ಲಿ ಮಂಡ್ಯ, ಮೈಸೂರು, ತುಮಕೂರು, ಹಾಸನ ಮತ್ತು ಬೆಂಗಳೂರು ಗ್ರಾಮಾಂತರ ಭಾಗಗಳಲ್ಲಿ ಈ ರೀತಿಯ ರಂಗಭೂಮಿ ಕಲಾವಿದರು ಅನ್-ಆರ್ಗನೈಜ್ಡ್ ಸೆಕ್ಟಾರ್ ಈ ಭಾಗದಲ್ಲಿರುವಂಥವರು ಸುಮಾರು 900 ತಂಡಗಳು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಯಕ್ಷಗಾನದ ಬಗ್ಗೆ ತಾವು...

ಶ್ರೀ ಎಂ. ಸಿ. ನಾಣಯ್ಯ : ಇದರ ಬಗ್ಗೆಯೂ ಯೋಚನೆ ಮಾಡೋಣ. ಮಾನ್ಯ ಕುಂಬ್ಳೆ ಸುಂದರರಾಯರು ಈ ಯಕ್ಷಗಾನಕ್ಕೆ ಸಂಬಂಧಪಟ್ಟ ಹಾಗೆ ಬಹಳಷ್ಟು ಸಾರಿ ಪ್ರಶ್ನೆಯನ್ನು ಎತ್ತಿದ್ದಾರೆ. ಇದರ ಬಗ್ಗೆಯೂ ಸಹ ನಾವು ಯೋಚನೆ ಮಾಡಬೇಕಾಗುತ್ತದೆ. ಇದರ ಜೊತೆಗೆ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಇವರಿಗೆ ಒಂದು ಸುಗ್ಗಿಯಿಂದ ಮತ್ತೊಂದು ಸುಗ್ಗಿಗೆ ಬರತಕ್ಕಂಥ ಮಧ್ಯೆ 2-3 ತಿಂಗಳುಗಳ ಸಮಯದಲ್ಲಿ ವೃತ್ತಿ ನಿರತರಾಗಿರುವವರಿಗೆ ಇನ್ನೊಂದು ರಂಗ ಸುಗ್ಗಿ ಎನ್ನುವಂಥ ಕಾರ್ಯಕ್ರಮವನ್ನು ಮಾಡಿದ್ದಾರೆ. ಆ ಕಾರ್ಯಕ್ರಮದಲ್ಲಿ ಯಾರ್ಯಾರು ವೃತ್ತಿ ನಿರತರಾಗಿರುತ್ತಾರೆ ಅವರು ಈ ಎರಡು ಮೂರು ತಿಂಗಳಲ್ಲಿ ಡ್ರಾಮಾದಲ್ಲಿ ಪಾತ್ರ ಮಾಡತಕ್ಕಂಥದ್ದಕ್ಕೆ ಅವರಿಗೆ ಮಾಹಿತಿಯನ್ನು ಕೊಟ್ಟು ಕಲಿಸುವಂಥ ಸಂದರ್ಭದಲ್ಲಿ ಅವರಿಗೆ5,000 ರೂಪಾಯಿಗಳನ್ನು ಕೊಡುವಂತಹ ಕಾರ್ಯಕ್ರಮಗಳನ್ನು ಕಳೆದ ವರ್ಷದಿಂದ ಜಾರಿಗೊಳಿಸಿದ್ದಾರೆ. ಕಳೆದ ವರ್ಷದಿಂದ ಐದು ಸಾವಿರ ರೂಪಾಯಿಗಳ ಪ್ರೋತ್ಸಾಹ ಧನವನ್ನು ಸುಮಾರು 15 ತಂಡಗಳಿಗೆ ಕೊಟ್ಟಿದ್ದೇವೆ. ಈ ವರ್ಷ ಅದನ್ನು ವಿಸ್ತರಿಸುವಂಥ ಅಂದರೆ ಹೆಚ್ಚು ಜನರಿಗೆ ಕೊಡಬೇಕೆಂಬ ತೀರ್ಮಾನಕ್ಕೆ ಸರ್ಕಾರ ಬಂದಿದೆ. ನಿಜ, ಇದು ನಶಿಸಿ ಹೋಗುತ್ತಿರುವಂತಹ ಕಲೆ ಎನ್ನುವಂಥಾದ್ದು ಕೂಡ ನಾವು ಒಪ್ಪಿಕೊಳ್ಳುತ್ತೇವೆ. ಈ ಭಾಗದಲ್ಲಿರುವಂತಹ ತಂಡದವರು ಯಾರು ಇದ್ದಾರೆ ಅವರನ್ನು ಗುರುತು ಹಚ್ಚುವಂತಹ ಕಾರ್ಯಕ್ರಮವನ್ನು ಇಲಾಖೆಯ ವತಿಯಿಂದ 1997-98ರಲ್ಲಿ ಮಾಡಿದರೆ ಹೆಚ್ಚು ಹೆಚ್ಚು ಪ್ರೋತ್ಸಾಹವನ್ನು ಕೊಡುವುದರ ಮೂಲಕ ತಲೆಮಾರಿನಿಂದ ಬಂದಿರುವಂತಹ ಈ ಕೆಲ ಮತ್ತು ನಾಟಕಗಳು ಏನಿದೆ ಇದು ಆಧುನಿಕ ಕಲೆಗಿಂತಲೂ ಒಳ್ಳೆಯ ಎತ್ತರ ಮಟ್ಟದಲ್ಲಿರುವಂಥಾದ್ದು ಮತ್ತು ಹೇಳುತ್ತಿರುವಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆ. ಅವರ ಚಿಂತನೆಯನ್ನು ಸರ್ಕಾರವು ಪರಿಗಣಿಸಿ ಇದರ ಬಗ್ಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವಂಥಾವ್ಯಕ್ಕೆ ಸರ್ಕಾರ ಮುಂದಿನ ವರ್ಷ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಉಪಾಧ್ಯಕ್ಷರೆ, 250 ರೂಪಾಯಿಗಳು ಬರದೆ ಇರುವಂತಹ ಉಪಾಧ್ಯಾಯರುಗಳು ಇದ್ದಾರೆ. ಈ ರೀತಿಯಗಿ ಮಾಸಾಶನ ಸಿಗದೆ ಇರುವವರನ್ನು ಐಡೆಂಟಿಫೈ ಮಾಡಿ, ಅವರಿಗೆ 250 ರೂಪಾಯಿಗಳು ಕೊಡುತ್ತಾರೆನ್ನುವ ವಿಷಯವು ಗೊತ್ತಿಲ್ಲದೇ ಇರುವಂತಹ ಮಾಸ್ಟರ್‌ಗಳು ಇದ್ದಾರೆ. ಆದುದರಿಂದ ದಯಮಾಡಿ ಅಂಥವರನ್ನು ಗುರುತು ಮಾಡುವಂಥಾದ್ದರಲ್ಲಿ ಸರ್ಕಾರ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಎಂ. ಸಿ. ನಾಣಯ್ಯ : ಈ ವರ್ಗದವರು ಕೆಲವರು ಇದ್ದಾರೆ. ಯಾವುದೇ ವೃತ್ತಿ ಮಾಡುವುದಕ್ಕಾಗದೇ ಇರುವಂತಹ ಪರಿಸ್ಥಿತಿಯಾಗಿದೆ, ಎರಡನೆಯದಾಗಿ ಆಶ್ರಯ ಮತ್ತು ಹಸಿರು ಕಾರ್ಡು ಇದರ ಬಗ್ಗೆ ಇವತ್ತಿನ ನಿಯಮಾವಳಿಯೊಳಗೆ ಯಾರ್ಯಾರಿಗೆ ಕೊಡಬೇಕೆಂದು ಇದೆ. ಆ ನಿಯಮಾವಳಿಯೊಳಗೆ ಬರುವಂತಹ ಮಾಸ್ಟರಗಳು ಇದ್ದರೆ ಅವರನ್ನು ಗುರುತು ಹಚ್ಚಿ ಈ ಕಾರ್ಯ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೆ, ತಾವು ಹೇಳಿದ್ದನ್ನೆಲ್ಲಾ ಒಪ್ಪುತ್ತೇವೆ. ಈ ಪರಿಹಾರಧನವನ್ನು ತಾವು ಏನು ಕೊಡುತ್ತಿದ್ದೀರಿ. ಇದನ್ನು ನೀವು ಒಂದು ವರ್ಷಕ್ಕೆ 1997-98ಕ್ಕೆ ಪ್ರಸ್ತಾಪ ಮಾಡುತ್ತಿದ್ದೀರಿ. ಆದರೆ 1996-97ರಲ್ಲಿ ಎಷ್ಟು ಜಾರಿಗೆ ಕೊಟ್ಟಿದ್ದೀರಿ? ನೀವು ಅದನ್ನು ವರ್ಷೇ ವರ್ಷ ಕೊಡುತ್ತಿದ್ದಿರೋ? ಇದನ್ನು ನೀವು ಕೊಡುತ್ತಾ ಇಲ್ಲ. ನೀವು ವರ್ಷಕ್ಕೆ ಎಷ್ಟು ಜನರಿಗೆ ಕೊಡಬೇಕೆಂದು ಬಜೆಟ್ ಪ್ರಾವಿಜನ್ ಇದೆ. ಆ ಪ್ರಕಾರ ಈ ವರ್ಷ ಕೊಟ್ಟಿದ್ದಿರೋ? ಈ ವರ್ಷ ಮುಗಿಯುವುದಕ್ಕೆ ಇನ್ನು ಐದು ದಿವಸಗಳು ಇದೆ.

ಶ್ರೀ ಎಂ. ಸಿ. ನಾಣಯ್ಯ : ಈ ವರ್ಷ ಈಗಾಗಲೇ 5,000 ರೂಪಾಯಿಗಳಂತೆ 15 ತಂಡದವರಿಗೆ ಕೊಟ್ಟಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ನಾನು ಆ, 5,000 ರೂಪಾಯಿಗಳ ಬಗ್ಗೆ ಅಲ್ಲ ಕೇಳಿದ್ದು, ನೀವು ಪ್ರೋತ್ಸಾಹ ಧನವೆಂದು 250 ರೂ.ಗಳು, 150 ರೂಪಾಯಿಗಳನ್ನು ಕೊಡಿ ಆ ಪ್ರಶ್ನೆ ಬೇರೆ ನಾನು ಕೇಳುತ್ತಿರುವಂಥಾದ್ದು ಈ ಮಾಸಾಶನ ಈ ವರ್ಷ ಒಬ್ಬರಿಗೂ ಕೊಟ್ಟಿಲ್ಲ. ಅದನ್ನು ಕೊಡುವುದಕ್ಕೆ ನಿಮ್ಮ ಹತ್ತಿರ ಹಣವಿಲ್ಲ, ಇದಕ್ಕೆ ತಾವು ಏನು ಹೇಳುತ್ತೀರಿ?

ಶ್ರೀ ಎಂ. ಸಿ. ನಾಣಯ್ಯ : ನಿಜ, ಕೆಲವು ಸಂದರ್ಭದಲ್ಲಿ ಈಗ ನಾವು ಸುಮಾರು 5,700 ಜನರಿಗೆ ಕೊಡುತ್ತಿದ್ದೇವೆ. ಒಂದು ವರ್ಷಕ್ಕೆ ಒಂದು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳನ್ನು ಅದಕ್ಕೋಸ್ಕರ ಕೊಡುತ್ತಿದ್ದೇವೆ. ಈ ಪೌರಾಣಿಕ ನಾಟಕಗಳನ್ನು ಆಡುವಂಥವರು, ಕಲಿಸುವಂತಹ ಮಾಸ್ತರರು ಈ ತಲೆಮಾರು ಹೋದರೆ ಮತ್ತೆ ಕಲಿಸುವುದಕ್ಕೆ ಯಾರೂ ಇರುವುದಿಲ್ಲ. ಆದುದರಿಂದ ಇದರ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕೆಂಬ ಬಗ್ಗೆ ಸರ್ಕಾರದ ಚಿಂತನೆಯೂ ಇದೆ. ಇದರ ಬಗ್ಗೆ ಇಲಾಖೆಯ ವತಿಯಿಂದ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡುವಂಥಾದ್ದು ಅಧಿಕಾರಿಗಳ ಚಿಂತನೆಯಲ್ಲಿದೆ. ಈ ಕೆಲಸವನ್ನು ಮಾಡಲಿಕ್ಕೆ ಇದ್ದೇವೆ. ಇದನ್ನು ಮಾಡುವಂಥಾದ್ದಕ್ಕೆ ನಾವು ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಕುಂಬ್ಳೆ ಸುಂದರರಾವ್ : ಮಾನ್ಯ ಉಪಾಧ್ಯಕ್ಷರೆ, ಯಕ್ಷಗಾನಕ್ಕೆ ಸಂಬಂಧಪಟ್ಟ ಹಾಗೆ ಒಂದು ಮಾತೂ ಕೂಡ ಬರುತ್ತಿಲ್ಲ. ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ, ಅದು ಯಕ್ಷಗಾನದಲ್ಲಿ ವೃತ್ತಿಮೇಳಗಳು ಎಷ್ಟು? ಎಂದು ಕೇಳಿದ್ದಕ್ಕೆ 44 ಎಂದು ಉತ್ತರ ಬಂತು. ವೃತ್ತಿ ಕಲಾವಿದರು ಎಷ್ಟು ಅಂದರೆ 960 ಎಂದು 1980ನೇ ಇಸವಿಯ ನಂತರ ಯಕ್ಷಗಾನ ಕಲಾವಿದರಿಗೆ ಯಾವುದೇ ಗೌರವ ಧನವನ್ನು ಕೊಡುತ್ತಿಲ್ಲ. ಈ ಗೌರವ ಧನವೆಂಬ ಹೆಸರನ್ನು ತೆಗೆದು ಮಾಸಾಶನವೆಂಬ ಅವಮಾನಕರವಾದಂತಹ ಹೆಸರನ್ನು

ತಿಡುವುದರ ಮೂಲಕ ಕಲಾವಿದರಿಗೆ ಅವಮಾನಮಾಡುವಂತಹ ಸ್ಥಿತಿಯಲ್ಲಿ ನೀವಿದ್ದೀರಿ. ಇದರಿಂದ ಅವಮಾನವಾದರೂ ಹೊಟ್ಟೆ ತುಂಬುತ್ತದೆಯೆ ಎಂದು ಕೇಳಿದರೆ 1986ನೇ ಇಸವಿಯ ನಂತರ ಯಾವುದೇ ಕಲಾವಿದರಿಗೆ ಈ ಗೌರವ ಧನವನ್ನು ನೀವು ಹೇಳುವಂತಹ ಮಾಸಾಶನವನ್ನು ಕೊಟ್ಟಿರುವಂಥಾದ್ದು ಕಾಣುವುದಿಲ್ಲ. ಇದು ಏಕೆ ಹೀಗೆ? ಈ ಯಕ್ಷಗಾನಕ್ಕೆ ಸರ್ಕಾರದಿಂದ ಏನು ಬರಬೇಕಾಗಿದೆಯೋ, ಸರ್ಕಾರದ ಅನುಗ್ರಹವಾಗಬೇಕಾಗಿದೆಯೋ, ಅದು ಆಗದೇ ಇದ್ದರೆ ಏನು ಪರಿಣಾಮವಾಗುತ್ತದೆಂಬುದನ್ನು ತಾವು ಆಗಲೇ ಹೇಳಿದ್ದೀರಿ. ಈ ಜಾನಪದ ಕಲೆ, ಸಂಸ್ಕೃತಿ ಏನಿದೆ, ಅದು ಜ್ಞಾನವನ್ನು, ಮನರಂಜನೆ ಎರಡನ್ನೂ ಕೊಡುವಂಥಾದ್ದು ಪರ್ಯಾಪ್ತವಾಗುತ್ತದೆ. ಇಂತಹ ಕಲೆಯ ವಿಷಯದಲ್ಲಿ ಈ ಅವಗಣನೆ ಏಕೆ? ಇದನ್ನು ಇನ್ನು ಎಷ್ಟು ದಿವಸಗಳಲ್ಲಿ ಕೊಡುತ್ತೀರಿ? ಈಗ ಲಿಸ್ಟ್‌ನಲ್ಲಿರುವಂತಹ ಹೆಸರುಗಳನ್ನು ನೋಡಿಕೊಂಡು ಆದ್ಯತೆಯ ಮೇಲೆ ಈ ವರ್ಷದಿಂದಲೇ ಕೊಡುವಂತಹ ಮನಸ್ಸು ಮಾಡುತ್ತೀರೋ?

ಶ್ರೀ ಎಂ.ಸಿ. ನಾಣಯ್ಯ : ನಾವು ಈ ವಿಷಯದಲ್ಲಿ ಮಾಡಬೇಕೆಂಬ ಮನಸ್ಸು ಮಾಡಿ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೇವೆ. ಆದರೆ ಈ ವರ್ಷ ಏನೋ ತಾವು ಸಿಗುತ್ತಿಲ್ಲವೆನ್ನುವಂತಹ ವಿಚಾರವನ್ನು ಈ ಯಕ್ಷಗಾನಕ್ಕೆ ಸಂಬಂಧಪಟ್ಟ ಹಾಗೆ ಹೇಳುತ್ತಿದ್ದೀರಿ. ಸರ್ಕಾರ ಇದನ್ನು ಪರಿಶೀಲನೆ ಮಾಡುತ್ತದೆ. ನಾವು ಈಗಾಗಲೇ 5700 ಜನರನ್ನು ಗುರುತಿಸಿ ಕೊಡಬೇಕೆಂದು ಪಟ್ಟಿಯನ್ನು ಮಾಡಿದ್ದೇವೆ. ಈಗ ತಾವು ಸಿಗುತ್ತಿಲ್ಲವೆಂಬ ವಿಚಾರವನ್ನು ಹೇಳಿದ್ದೀರಿ.

ಶ್ರೀ ಕುಂಬ್ಳೆ ಸುಂದರರಾವ್ : ಮಾನ್ಯ ಉಪಾಧ್ಯಕ್ಷರೆ, 1986ನೇ ಇಸವಿಯ ನಂತರ ಯಕ್ಷಗಾನ ಕಲಾವಿದರಲ್ಲಿ ದುಡಿಯುತ್ತಿದ್ದವರು ಈಗ ದುಡಿಯಲಾಗದೇ ನಿಶಕ್ತರಾಗಿರುವವರು ಯಾರಿದ್ದಾರೆ. ಅವರೆಲ್ಲರನ್ನು ಅವಗಣಿಸಲ್ಪಟ್ಟಿದ್ದಾರೆ, ಅವರಿಗೆ ಸಿಗುತ್ತಾ ಇಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದ ನಂತರ ಆಗಿರುವಂಥಾದ್ದು ನಾನು ಹೇಳುತ್ತಿದ್ದೇನೆ. ತಾವು ಅಪರೂಪಕ್ಕೆ ಆಗಿರುವಂಥ ಒಂದೆರಡನ್ನು ಹೇಳಬಹುದು. ಆದರೆ ಇಷ್ಟು ದೊಡ್ಡ ಸಂಖ್ಯೆಯಲ್ಲಿರುವವರು ಏನು ಮಾಡಬೇಕು. ಅವರು ರಂಗಸ್ಥಳದಲ್ಲಿ ದೇವೆಂದ್ರರಾಗಿ, ಕೃಷ್ಣರಾಗಿ, ರಾಮರಾಗಿ ಪಾತ್ರಗಳನ್ನು ಮಾಡಿ ಹೊರಗಡೆ ಬಂದು ಬೀಡಿಗಳನ್ನು ಕೇಳುವಂತಹ ಸ್ಥಿತಿ ಇದೆ.

ಶ್ರೀ ಎಂ. ಸಿ. ನಾಣಯ್ಯ : ನೀವು ಕಲಿಸುವಂತಹ ಕಲೆಯನ್ನು, ಕಲಿಸುವಂತಹ ಜನರು, ಇವೆಲ್ಲವೂ ಉಳಿಯಬೇಕೆಂಬುದು ನಮ್ಮಗಳ ಆಸೆ ಇದೆ. ಇದಕ್ಕೆ ಪೂರಕವಾಗಿ ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿದೆ. ಆದುದರಿಂದ ಮಾಸಾಶನ ಸಿಗುತ್ತಿಲ್ಲವೆಂದು ತಾವು ದಯಮಾಡಿ ಕಲೆಯನ್ನು ಮಾತ್ರ ಬಿಡಬೇಡಿ.

UPGRADATION OF SURATKAL VETERENARY DISPENSARY

182 - Sri Kumble Sunder Rao (Surathkal) : will the Ministers State for Animal Husbandary be pleased to state?

a) Whether it has come to the notice of the government that the upgraded Veterinary Dispensary has shortage of space;